ರಾಜ್ಯ ಹೆದ್ದಾರಿ 71ರ ಕಾಮಗಾರಿ ಸ್ಥಗಿತ

948 (1657); ಶ್ರೀ ಮಂಜು ಎ. (ಅರಕಲಗೂಡು)

(ಅ) ರಾಜ್ಯ ಹೆದ್ದಾರಿ – 71ರ ತಿಪಟೂರು ದುದ್ದ ರಸ್ತೆಯ 37.2 ಕಿ.ಮೀ. ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) 2010ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೆಆರ್‌ಡಿಸಿಎಲ್‌ಗೆ ಇದರ ಜವಾಬ್ದಾರಿಯನ್ನು ವಹಿಸಿದ್ದರೂ ಅವರು ಕೆಲಸ ಪೂರ್ಣ ಗೊಳಿಸದಿರುವುದಕ್ಕೆ ಕಾರಣ ಏನು;

(ಇ) ಈ ಯೋಜನೆಯನ್ನು ವಹಿಸಿಕೊಂಡಿರುವ ಅಭಿಜಿತ್ ಎಂಬ ಕಂಪನಿ ಯನ್ನು ಕೇಂದ್ರ ಸರ್ಕಾರ ಕಪ್ಪು ಪಟ್ಟಿಗೆ ಸೇರಿಸಿ ರದ್ದುಗೊಳಿಸಿದ್ದರೂ ಅದರ ಬದಲಾಗಿ ಬೇರೊಂದು ಸಂಸ್ಥೆಗೆ ಈ ಕಾಮಗಾರಿಯನ್ನು ವರ್ಗಾಯಿಸದಿರಲು ಕಾರಣ ಏನು;

(ಈ) ಹಾಗಿದ್ದಲ್ಲಿ, ಸಮಸ್ಯೆ ಬಗೆಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಉ) ಇದು ಸಾರ್ವಜನಿಕರಿಗೆ ಅತ್ಯಂತ ಅವಶ್ಯವಿರುವ ರಸ್ತೆಯಾಗಿದ್ದು, ಅತ್ಯಂತ ಬೇಗನೆ ಇದರೆ ಕಾಮಗಾರಿಯನ್ನು ಪೂರ್ಣಗೊಳಿಸಿ ಉತ್ತಮ ರಸ್ತೆಯ ನ್ನಾಗಿ ಮಾಡಲು ಸರ್ಕಾರಕ್ಕೆ ಆಸಕ್ತಿ ಇದೆಯೇ?

ಡಾ. ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಸದರಿ ಯೋಜನೆಯನ್ನು ಬಿಓ.ಟಿ–ವಿಜಿಎಫ್ (ಶುಲ್ಕ) ಆಧಾರದಡಿ ಯಲ್ಲಿ ತೆಗೆದುಕೊಳ್ಳಲಾಗಿದ್ದು, ರಿಯಾಯಿತಿದಾರರಾದ ಮೇ॥ ಅಭಿಜಿತ್ ಟೋಲ್ ರೋಡ್ (ಕರ್ನಾಟಕ) ಲಿಮಿಟೆಡ್, ರವರೊಂದಿಗೆ ದಿನಾಂಕ: 03.06.2011 ರಂದು ಕರಾರನ್ನು ಮಾಡಿಕೊಳ್ಳಲಾಗಿರುತ್ತದೆ. ದಿನಾಂಕ 05.01.2012 ರಂದು ಯೋಜನಾ ಕಾಮಗಾರಿಯನ್ನು ಪ್ರಾರಂಭಿಸಲಾಗಿ

ಇಲ್ಲಿಯವರೆಗೂ ಭಾಗಶಃ ಅನುಷ್ಠಾನಗೊಳಿಸಿದ್ದು, ಆಗಸ್ಟ್ 2012ರಿಂದ ಯೋಜನೆಯ ಅನುಷ್ಠಾನವನ್ನು ಸ್ಥಗಿತಗೊಳಿಸಿರುತ್ತಾರೆ. ರಸ್ತೆಯ ಅಭಿವೃದ್ಧಿ ಕಾಮಗಾರಿಯು ಇನ್ನೂ ಸ್ಥಗಿತಗೊಂಡಿರುವುದಕ್ಕೆ ಕಾರಣಗಳು ಈ ಕೆಳಗಿನಂತಿವೆ:

ತಿಪಟೂರು ಬೈಪಾಸ್‌ಗಾಗಿ ಹಾಗೂ ಚಿಕ್ಕನಾಯಕನಹಳ್ಳಿ ತಿಪಟೂರು ಮಧ್ಯಭಾಗದ ಅತಿಯಾದ ತಿರುವುಗಳನ್ನು ಸರಿಪಡಿಸುವ ಸಲುವಾಗಿ ಒಟ್ಟು 98.00 ಎಕರೆ ಭೂಸ್ವಾಧೀನಪಡಿಸಿಕೊಳ್ಳುವುದರಲ್ಲಿ ವಿಳಂಬ.

ದುದ್ದ ಬಳಿ ರೈಲ್ವೆ ಮೇಲ್ಸೇತುವೆಯ ಸಂಬಂಧವಾಗಿ ರೈಲ್ವೆ ಇಲಾಖೆಯ ಸಮನ್ವಯದೊಂದಿಗೆ 10.00 ಎಕರೆ ಭೂಸ್ವಾಧೀನಪಡಿಸಿಕೊಳ್ಳುವುದರಲ್ಲಿ ವಿಳಂಬ.

ರಿಯಾಯಿತಿದಾರರಿಗೆ ಕಲ್ಲುಗಣಿಗಾರಿಕೆ ಪರವಾನಗಿ ಪಡೆಯುವಲ್ಲಿ ವಿಳಂಬ.

ಆಗಸ್ಟ್ 2012 ರಿಂದ ಸ್ಥಗಿತಗೊಂಡಿರುವ ಕಾಮಗಾರಿಯನ್ನು ನಿರ್ವಹಣೆ ಮಾಡದ ಕಾರಣ ` 11.92 ಕೋಟಿಗಳ ಬ್ಯಾಂಕ್ ಗ್ಯಾರಂಟಿಯನ್ನು ನಗಧೀಕರಣ ಮಾಡಿಕೊಂಡು ಸಾಮಾನ್ಯ ನಿರ್ವಹಣೆಯನ್ನು ಕೈಗೊಳ್ಳಲು ಕ್ರಮ ವಹಿಸುವ ಸಂದರ್ಭದಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ನಗಧೀಕರಣ ಮಾಡದಂತೆ ರಿಯಾಯಿತಿದಾರರು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುತ್ತಾರೆ. ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ಕೆಆರ್‌ಡಿಸಿಎಲ್‌ದಿಂದ ಕ್ರಮ ತೆಗೆದುಕೊಳ್ಳಲಾಗಿತ್ತು. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 26.08.2013 ರಂದು ರಿಯಾಯಿತಿದಾರರಿಗೆ ಸದರಿ ರಸ್ತೆಯ ನಿರ್ವಹಣೆಯನ್ನು ದಿನಾಂಕ: 30.08.2013 ರೊಳಗೆ ಪ್ರಾರಂಭಿಸಲು ನಿರ್ದೇಶನ ನೀಡಿ ಮುಂದಿನ ವಿಷಯಗಳಿಗೆ ಕೆಳ ನ್ಯಾಯಾಲಯವನ್ನು ಸಂಪರ್ಕಿಸಲು ಆದೇಶ ನೀಡಿರುತ್ತದೆ. ಅದರಂತೆ ದಿನಾಂಕ: 29.08.2013 ರಿಂದ ರಿಯಾಯಿತಿದಾರರು ಹಾಲಿ ರಸ್ತೆಯ ಸಾಮಾನ್ಯ ನಿರ್ವಹಣೆಯನ್ನು ಪ್ರಾರಂಭಿಸಿ

ರುತ್ತಾರೆ. ಹಾಗೂ ರಿಯಾಯಿತಿದಾರರು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಬಿಟ್ರೇಷನ್ ದಾವೆಯನ್ನು ಹೂಡಿದ್ದು, ಅದನ್ನು ದಿನಾಂಕ 03.05.2014 ರಂದು ಹಿಂಪಡೆದಿರುತ್ತಾರೆ.

(ಇ) ಮೆ. ಅಭಿಜಿತ ಟೋಲ್ ರೋಡ್ (ಕರ್ನಾಟಕ) ಲೀ. ರವರನ್ನು ಕಪ್ಪು ಪಟ್ಟಿಗೆ ಸೇರಿಸಿರುವ ವಿಷಯವು ಗಮನಕ್ಕೆ ಬಂದಿರುವುದಿಲ್ಲ.

(ಈ) ಈ ಬಗ್ಗೆ ರಿಯಾಯಿತಿದಾರರಿಗೆ ಮಾಹಿತಿ ನೀಡಿ ಕಾಮಗಾರಿ ಪ್ರಗತಿಯನ್ನು ಚುರುಕುಗೊಳಿಸಲು ಹಲವಾರು ಸಭೆಗಳನ್ನು ನಡೆಸಿ ಸೂಕ್ತ ಸಲಹೆ ಮತ್ತು ಮಾರ್ಗೋಪಾಯಗಳನ್ನು ನೀಡಲಾಗಿರುತ್ತದೆ.

(ಉ) ರಿಯಾಯಿತಿದಾರರು 06.01.2014 ರಿಂದ ಪುನಃ ಚುರುಕುಗೊಳಿಸಿ ಕಾಮಗಾರಿ ಪ್ರಾರಂಭಿಸಿರುತ್ತಾರೆ.

ಸದರಿ ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಭೂಮಿ ಒಟ್ಟು 108 ಎಕರೆ 28 ಗಂಟೆ ಭೂ ಸ್ವಾಧೀನ ಅವಶ್ಯಕತೆ ಇದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ.

ಬಸ್ ನಿಲ್ದಾಣಕ್ಕೆ ಮೇಲ್ಸೇತುವೆ ನಿರ್ಮಾಣ

949 (1658); ಶ್ರೀ ಮಂಜು ಎ. (ಅರಕಲಗೂಡು)

(ಅ) ಹಾಸನ ನಗರದ ಹೊಸ ಬಸ್‌ನಿಲ್ದಾಣದಿಂದ ರೇಲ್ವೆ ಹಳಿ ಮಾರ್ಗವಾಗಿ ನಗರದ ಒಳಭಾಗಕ್ಕೆ ಪ್ರವೇಶಿಸುವ ರಸ್ತೆ ಅತ್ಯಂತ ತ್ರಾಸದಾಯಕವಾಗಿದ್ದು ವಾಹನಗಳ ಸಂಚಾರಕ್ಕೆ ಮೇಲ್ಸೇತುವೆ ನಿರ್ಮಾಣ ಮಾಡಬೇಕಾಗಿರುವುದು ಅತಿ ಅವಶ್ಯಕ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಮೇಲ್ಸೇತುವೆ ನಿರ್ಮಾಣ ಮಾಡಲು ಸರ್ಕಾರಕ್ಕೆ ಇಚ್ಛೆ ಇದೆಯೇ;